**1ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು ದಿ:20.09.2023 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎಂ ಪಿ ವಕೀಲರವರಿಂದಃ-**

1. ನಾನು 1999 ರಿಂದ ವಕೀಲರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ನಾನು ಯಾವುದೇ ಕಚೇರಿಯನ್ನು ಮಾಡಿರುವುದಿಲ್ಲ. ನಾನು ಮದ್ದೂರು ಬೆಂಗಳೂರಿನಲ್ಲಿ ವಕೀಲ ವೃತ್ತಿ ಮಾಡುತ್ತೇನೆ. ನಾನು ನಿರಂತರವಾಗಿ ಪತ್ರ ಬರಹಗಾರರನಲ್ಲ ಆದರೆ ಅವಶ್ಯಕತೆಯಿದ್ದಲ್ಲಿ ಬರೆಯುತ್ತೇನೆ. ಎಷ್ಟು ಪತ್ರಗಳನ್ನು ಬರೆದಿದ್ದೇನೆಂದು ನನಗೆ ನೆನಪಿಲ್ಲ. ನಾನು ಪತ್ರ ಬರೆದ ಬಗ್ಗೆ ರಿಜಿಸ್ಟರ್ ಗಳಲ್ಲಿ ನಮೂದಿಸಿಲ್ಲ ಮತ್ತು ರಿಜಿಸ್ಟರ್ ನ್ನು ಹೊಂದಿಲ್ಲ. ವಿವಾದಿತ ಪತ್ರವನ್ನು ಹೊರತುಪಡಿಸಿ ಬೇರೆ ಯಾವುದೇ ಪತ್ರಗಳನ್ನು ಬರೆದಿರುವುದಿಲ್ಲ. ನಾನು ಗೊರವನಹಳ್ಳಿಯಲ್ಲಿ ಮೌಖಿಕವಾಗಿ ಬರೆದುಕೊಂಡಿದ್ದು ಮದ್ದೂರಿಗೆ ಬಂದು ಟೈಪ್ ಮಾಡಿಸಿರುತ್ತೇನೆ. ನನ್ನನ್ನು ವಾದಿಯವರು ಗೊರವನಹಳ್ಳಿಗೆ ಕರೆದುಕೊಂಡು ಹೋಗಿದ್ದರು. ಗೊರವನಹಳ್ಳಿಯಲ್ಲಿ ವಾದಿ ಮತ್ತು ಪ್ರತಿವಾದಿಗಳು ವಾದಿಯ ಮನೆಯಲ್ಲಿ ಪರಸ್ಪರ ಮಾತುಕತೆ ಮಾಡಿಕೊಂಡಿರುತ್ತಾರೆ. ನನಗೆ ಸಮಯ ನೆನಪಿಲ್ಲ. ಸುಮಾರು 10-11 ಗಂಟೆ ಇರಬಹುದು. ಸದರಿ ಮಾತುಕತೆಯಲ್ಲಿ ಪುಟ್ಟಸ್ವಾಮಿ ಎಂಬುವವರು ಅವರ ತಮ್ಮಂದಿರು ಮತ್ತು ಮಕ್ಕಳು ಇದ್ದರು. ಅವರ ಹೆಸರುಗಳು ನನಗೆ ನಿಖರವಾಗಿ ಗೊತ್ತಿಲ್ಲ. ನಾನು ಹೋಗುವಷ್ಟರಲ್ಲಿಯೇ ಮಾತುಕತೆ ಆಗಿತ್ತು. ಸ್ಥಳದಲ್ಲಿ ಯಾವುದೇ ಬರವಣಿಗೆ ಆಗಿಲ್ಲ. ಸಾಕ್ಷಿಯು ಮುಂದುವರೆದು ಮೌಖಿಕವಾಗಿ ಹೇಳಿದ್ದಾರೆ ಎನ್ನುತ್ತಾರೆ. ಸ್ಥಳದಲ್ಲಿ ಬರವಣಿಗೆ ಮಾಡಲು ತೊಂದರೆ ಇರಲಿಲ್ಲ ಎಂದರೆ ಟೈಪ್ ಮಾಡಿಸಬೇಕಾದ್ದರಿಂದ ಬರವಣಿಗೆ ಮಾಡಲಿಲ್ಲ ಎನ್ನುತ್ತಾರೆ. 12-00 ಗಂಟೆ ಒಳಗೆ ಮದ್ದೂರಿಗೆ ಬಂದಿರುತ್ತೇವೆ. ಸದರಿಯನ್ನು ತಾಲ್ಲೂಕು ಕಚೇರಿಯ ಬಳಿ ಟೈಪ್ ಮಾಡಿಸಿರುತ್ತೇನೆ. ಸದರಿ

ಮದ್ರಾಂಕ ಪತ್ರವನ್ನು ಯಾರು ತಂದರು ಎಂದು ನನಗೆ ಹೆಸರು ನೆನಪಿಲ್ಲ. ಸದರಿ ಪತ್ರವು 50 ರೂ ಇರಬಹುದು. ನಿಪಿ-2 ರ ಒಕ್ಕಣೆಯನ್ನು ವಾದಿಯವರು ಹೇಳಿರುತ್ತಾರೆ. ಸ್ವತ್ತಿನ ದಾಖಲಾತಿಯನ್ನು ನಾನು ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಪತ್ರ ಬರಹಗಾರರು ಸ್ವತ್ತಿನ ದಾಖಲಾತಿಯನ್ನು ಪರಿಶೀಲನೆ ಮಾಡುತ್ತಾರೆಂದರೆ ಸಾಕ್ಷಿಯು ಕೇವಲ ಕರಾರುಪತ್ರವಾಗಿರುವುದರಿಂದ ಪರಿಶೀಲನೆ ಮಾಡಿಲ್ಲ ಎನ್ನುತ್ತಾರೆ. ಗೊರವನಹಳ್ಳಿ ಸರ್ವೆ ನಂಃ 57 ರ, 4 ಗುಂಟೆ ಜಮೀನಾಗಿದೆ. ವಾದಿಯವರು ಹೇಳಿದಂತೆ ನಾನು ಪತ್ರ ಬರೆದಿದ್ದೇನೆಂದರೆ ಸರಿ. ಪತ್ರ ವ್ಯವಹಾರ ಸುಮಾರು 1/2 ಗಂಟೆ ಒಳಗೆ ಮುಗಿದಿರುತ್ತದೆ. ಪತ್ರಕ್ಕೆ ಮೊದಲಿಗೆ ವಾದಿಯ ಗಂಡ ಪುಟ್ಟಸ್ವಾಮಿ ಎಂಬುವವರು ಸಹಿ ಮಾಡಿರುತ್ತಾರೆ ನಂತರ ಖರೀದಿದಾರರು ಸಹಿ ಮಾಡಿರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಸಾಕ್ಷಿದಾರರನ್ನು ಒಳಗೊಂಡಂತೆ 3-4 ಜನರು ಸಹಿ ಮಾಡಿರುತ್ತಾರೆ. ಸ್ವತ್ತಿನ ಮಾಲೀಕರು ಯಾರು ಪರಿಶೀಲನೆ ಮಾಡಿರುವುದಿಲ್ಲ. ಪತ್ರ ಬರೆದ ನಂತರ ಬೇರೆ ಯಾವುದೇ ವ್ಯವಹಾರ ಆಗಿಲ್ಲ. ಸಾಕ್ಷಿಯು ಮುಂದುವರೆದು ಹಣ ಕೊಡುವುದು ಮುಂಚೆಯೇ ಮಾತುಕತೆ ಆಗಿತ್ತು. ನನ್ನ ಮುಂದೆ ಹಣ ನೀಡಿರುವುದಿಲ್ಲ ಎನ್ನುತ್ತಾರೆ. ನಿಪಿ-2 ರ ಪತ್ರವನ್ನು ವಾದಿಯವರು ತೆಗೆದುಕೊಂಡು ಹೋಗಿರುತ್ತಾರೆ. ಸದರಿ ನಿಪಿ-2 ರಲ್ಲಿ ವಾದಿಯವರು ಹೇಳಿದ ಸರ್ವೆ ನಂಬರ್ ನಾನು ಬರೆಸಿರುತ್ತೇನೆ. ನಿಪಿ-2 ರಡಿ ಸ್ವಾಧೀನ ಬಿಟ್ಟುಕೊಡುತ್ತಿರುವುದಾಗಿ ಬರೆಸಿರುತ್ತಾರೆ. ದಿಃ05-10-2000 ನೇ ಇಸವಿಯಲ್ಲಿ ನಾನು ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಕ್ರಯದ ಕರಾರುಪತ್ರದಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಹಿ ಮಾಡಿದ್ದಾರೆಂದು ಸುಳ್ಳು ನುಡಿಯುತ್ತಿದ್ದು ನನ್ನ ಮುಂದೆ ಯಾರು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಮುಂದೆ ಯಾವುದೇ ಕ್ರಯದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿರುವುದು ಪ್ರತಿವಾದಿಗಳ ಸಹಿ ಅಲ್ಲ ಎಂದರೆ ಸರಿಯಲ್ಲ. ಆ ದಿನ ಸಾಕ್ಷಿದಾರರು ಯಾರು ಹಾಜರಿರಲಿಲ್ಲ ಮತ್ತು ಸಹಿ ಮಾಡಿರಲಿಲ್ಲ ಎಂದರೆ

ಸರಿಯಲ್ಲ. ನನಗೆ ನಿಪಿ-2 ರ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ವಾದಿಯ ಮಾತನ್ನು ಕೇಳಿಕೊಂಡು ನಾನೇ ಪತ್ರ ಬರೆದಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು, ವಾದಿ ಮತ್ತು ಸಾಕ್ಷಿಗಳು ಸೇರಿ ನಿಪಿ-2 ನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಒ**

**(ನಳಿನ ಎಸ್. ಸಿ.)**
**1ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮದ್ದೂರು.**